ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

(ಅನುಬಂಧ–3)

ಬಿ.ಪಿ.ಎಲ್. ಪಡಿತರ ಚೀಟಿ ಬಗ್ಗೆ

5059 (4530); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ಜಿಲ್ಲೆಯಲ್ಲಿ ವಿತರಿಸಲಾಗಿರುವ ಬಿ.ಪಿ.ಎಲ್. ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಆ) ವಿತರಿಸಲು ಬಾಕಿ ಇರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಇ) ಯಾವಾಗ ಪೂರ್ಣಗೊಳಿಸಲಾಗುವುದು; (ವಿವರ ನೀಡುವುದು);

ಈ) ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಸ್ತುಗಳನ್ನು ವಿತರಿಸಲು ಬಯೋಮೆಟ್ರಿಕ್ ತಂತ್ರಜ್ಞಾನವನ್ನು ಅಳವಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ದಿನೇಶ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿ 7,475 ಎಎವೈ ಹಾಗೂ 89,801 ಬಿ.ಪಿ.ಎಲ್. ಹೀಗೆ ಒಟ್ಟು 97,276 ಬಿ.ಪಿ.ಎಲ್. ಪಡಿತರ ಚೀಟಿಗಳಿರುತ್ತವೆ.

ಆ) 2015–16ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಪಡಿತರ ಚೀಟಿ ಕೋರಿ ಸಲ್ಲಿಸಿರುವ ಅರ್ಜಿಗಳು, ವಿತರಿಸಿರುವ ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿದೆ.

ಸ್ವೀಕೃತಿಯಾದ ಪಡಿತರ ಚೀಟಿಗಳ ಸಂಖ್ಯೆ			ವಿಲೇವಾರಿಯಾದ ಅರ್ಜಿಗಳ ಸಂಖ್ಯೆ		
ಎ.ಪಿ.ಎಲ್.	ಬಿ.ಪಿ.ಎಲ್.	ಒಟ್ಟು	ಎ.ಪಿ.ಎಲ್.	ಬಿ.ಪಿ.ಎಲ್.	ಒಟ್ಟು
2087	9087	11174	963	4992	5955

ತಿರಸ್ಕೃತವಾದ ಅರ್ಜಿಗಳ ಸಂಖ್ಯೆ			ವಿಲೇವಾರಿ ಮಾಡಲು ಬಾಕಿ ಇರುವಂತಹ ಅರ್ಜಿಗಳ ಸಂಖ್ಯೆ		
ಎ.ಪಿ.ಎಲ್.	ಬಿ.ಪಿ.ಎಲ್.	ಒಟ್ಟು	ಎ.ಪಿ.ಎಲ್.	ಬಿ.ಪಿ.ಎಲ್.	ಒಟ್ಟು
98	342	440	1026	3753	4779

ಇ) ವಿತರಿಸಲು ಬಾಕಿ ಇರುವ 1026 ಎಪಿಎಲ್ ಹಾಗೂ 3753 ಬಿಪಿಎಲ್ ಪಡಿತರ ಚೀಟಿಗಳ ಅರ್ಜಿಗಳನ್ನು ಪರಿಶೀಲನೆ ಮಾಡಿ ಶೀಘ್ರದಲ್ಲಿ ವಿತರಿಸಲಾಗುವುದು.

ಈ) ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಅಮೂಲಾಗ್ರವಾಗಿ ಸುಧಾರಿಸುವ ನಿಟ್ಟಿನಲ್ಲಿ ಅರ್ಹ ಪಡಿತರ ಚೀಟಿದಾರರೇ ಆಹಾರಧಾನ್ಯ ಎತ್ತುವಳಿ ಮಾಡುವುದನ್ನು ದೃಢಪಡಿಸಿಕೊಳ್ಳಲು ಪಡಿತರ ಚೀಟಿದಾರರ ಬೆರಳಚ್ಚು ಪಡೆದು ಆಹಾರಧಾನ್ಯ ವಿತರಿಸಲು ಅನುವಾಗುವಂತಹ ಬಯೋಮೆಟ್ರಿಕ್ ತಂತ್ರಜ್ಞಾನವನ್ನು ಹೊಂದಿರುವ ಪಾಯಿಂಟ್ ಆಫ್ ಸೇಲ್ (POS) ಎಂಬ ಯಂತ್ರಗಳನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಅಳವಡಿಸಲಾಗುತ್ತಿದೆ. ರಾಜ್ಯದಲ್ಲಿ ಈವರೆವಿಗೂ 7 ಜಿಲ್ಲೆಗಳಲ್ಲಿನ ಒಟ್ಟು 3877 ನ್ಯಾಯಬೆಲೆ ಅಂಗಡಿಗಳಲ್ಲಿ ಈ ತಂತ್ರಜ್ಞಾನವನ್ನು ಅಳವಡಿಸಲಾಗಿರುತ್ತದೆ. ಉಳಿದ ನ್ಯಾಯಬೆಲೆ ಅಂಗಡಿಗಳಲ್ಲಿಯೂ ಈ ಪಾಯಿಂಟ್ ಆಫ್ ಸೇಲ್ ಎಂಬ ಯಂತ್ರಗಳನ್ನು ಅಳವಡಿಸುವ ಯೋಜನೆಯು ಇಲಾಖೆಯ ಮುಂದಿದ್ದು, ಆದಷ್ಟು ಶೀಘ್ರದಲ್ಲಿ ಅಳವಡಿಸಲಾಗುವುದು.